ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/342/2021-22

ದಿನಾಂಕ 28-03-2022

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 19-03-2022ರಂದು ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯದ ನೂರ ಎರಡನೇ ವಾರ್ಷಿಕ ಘಟಿಕೋತ್ಸವದ ಪೂರ್ವಾಭಾವಿಯಾಗಿ, ದಿನಾಂಕ 19-03-2022ರಂದು ಮಧ್ಯಾಹ್ನ 12-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ **18-04-2022**ರ ಒಳಗಾಗಿ, ಉಪಕುಲಸಚಿವರು ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

28/3/2022

ಕುಲಸಚಿವ

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು - ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 102ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ದಿನಾಂಕ: 19-03-2022 ರಂದು ಅಪರಾಹ್ನ 12.30 ಗಂಟೆಗೆ ಜರುಗಿದ ಶಿಕ್ಷಣ ಮಂಡಳ ವಿಶೇಷ ಸಭೆಯ ನಡವಳಿಗಳು

<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು</u>

| | |
|---|---|
| 1) ಪ್ರೊ. ಜಿ.ಹೇಮಂತಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2) ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು ಇವರ ಪರವಾಗಿ<br>ಶ್ರೀ ಕೆ.ಸಿ ವೀರಭದ್ರಯ್ಯ, ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3) ಡಾ. ಕೆ.ವಿ. ಸುರೇಶ್ | ಸದಸ್ಯರು |
| 4) ಶ್ರೀ ದಿನೇಶ್ ಎಂ. ಗಾವಂಕರ್ | |
| 5) ಡಾ. ಎಂ. ಶಾರದ | ಸದಸ್ಯರು |
| 6) ಡಾ. ಜಿ.ಗೋವಿಂದರಾಜು | ಸದಸ್ಯರು |
| 7) ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 8) ಡಾ. ಜೆ.ಎನ್. ವೆಂಕಟೇಶ್ | ಸದಸ್ಯರು |
| 9) ಡಾ. ಬಿ. ರಾಜಣ್ಣ | ಸದಸ್ಯರು |
| 10) ಡಾ. ನಿರ್ಮಲ.ಹೆಚ್.ಎಂ | ಸದಸ್ಯರು |
| 10) ಡಾ. ವೆಂಕಟೇಶಯ್ಯ | ಸದಸ್ಯರು |
| 11) ಶ್ರೀ ನಂದೀಶ್.ಎಸ್ | ಸದಸ್ಯರು |
| 12) ಶ್ರೀ ಟಿ. ನಾಗರಾಜು | ಸದಸ್ಯರು |
| 13) ಡಾ. ಪ್ರಶಾಂತ್.ಎಸ್.ಟಿ | ಸದಸ್ಯರು |
| 14) ಪ್ರೊ. ಕೆ.ವಿ. ಅಯ್ಯಣ್ಣ | ಸದಸ್ಯರು |
| 15) ಶ್ರೀ ಹೆಚ್.ಪಿ. ಶಶಿಕುಮಾರ್ | ಸದಸ್ಯರು |
| 16) ಡಾ. ಭಾಗ್ಯಲಕ್ಷ್ಮಿ | ಸದಸ್ಯರು |
| 17) ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 18) ಶ್ರೀ ಶಿವಕುಮಾರ್.ಎಂ | ಸದಸ್ಯರು |
| 19) ಶ್ರೀ ಎಂ.ಸಿ. ರಾಜಶೇಖರ್ | ಸದಸ್ಯರು |
| 20) ಪ್ರೊ. ವೈ.ಬಿ. ಬಸವರಾಜು | ಸದಸ್ಯರು |
| 21) ಪ್ರೊ. ಮುಜ಼ಾಫರ್ ಹೆಚ್. ಅಸ್ಸಾದಿ | ಸದಸ್ಯರು |
| 22) ಪ್ರೊ. ಎಂ.ಜಿ. ಮಂಜುನಾಥ್ | ಸದಸ್ಯರು |
| 23) ಪ್ರೊ. ರಮೇಶ್ | ಸದಸ್ಯರು |
| 24) ಪ್ರೊ. ನಿಂಗಮ್ಮ ಸಿ. ಬೆಟ್ಸೂರ್ | ಸದಸ್ಯರು |
| 25) ಪ್ರೊ. ಹೆಚ್. ರಾಜಶೇಖರ್ | ಸದಸ್ಯರು |
| 26) ಪ್ರೊ. ಹೆಚ್.ಟಿ. ಬಸವರಾಜಪ್ಪ | ಸದಸ್ಯರು |
| 27) ಪ್ರೊ. ಎಂ.ಎಸ್. ಶೇಖರ್ | ಸದಸ್ಯರು |

28) ಪ್ರೊ. ಜಿ.ಆರ್. ಜನಾರ್ಧನ ಸದಸ್ಯರು
29) ಡಾ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) ಸದಸ್ಯರು
30) ಪ್ರೊ. ಸಿ.ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ), ಸದಸ್ಯರು
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ
31) ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ಸದಸ್ಯರು
32) ಪ್ರೊ. ಎ.ಪಿ. ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) ಸದಸ್ಯರು
33) ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು ಸದಸ್ಯರು
34) ಪ್ರೊ. ಆರ್.ಶಿವಪ್ಪ, ಕುಲಸಚಿವರು ಸದಸ್ಯ ಕಾರ್ಯದರ್ಶಿ

<u>ಸಭೆಯಲ್ಲಿ ಗೈರುಹಾಜರಾಗಿರುವವರು:</u>

35) ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
36) ಶ್ರೀ ಸಿ.ಎಸ್. ನಿರಂಜನ ಕುಮಾರ್, ಎಂ.ಎಲ್.ಎ
37) ಶ್ರೀ ಪ್ರೀತಂ ಜೆ ಗೌಡ, ಎಂ.ಎಲ್.ಎ
38) ಶ್ರೀ ಎಂ. ಶ್ರೀನಿವಾಸ್, ಎಂ.ಎಲ್.ಎ
39) ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ
40) ಶ್ರೀ ಸಿ.ಎನ್.ಮಂಜೇಗೌಡ, ಎಂ.ಎಲ್.ಸಿ
41) ಶ್ರೀಮತಿ ವೀಣಾ ಅಚ್ಚಯ್ಯ, ಎಂ.ಎಲ್.ಸಿ
42) ಡಾ. ಬಿ.ಎನ್.ಆಶಾ
43) ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ಹಾಗೂ
ಪ್ರಭಾರ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ

ಮೊದಲಿಗೆ ಮಾನ್ಯ ಕುಲಸಚಿವರು 102ನೇ ವಾರ್ಷಿಕ ಘಟಿಕೋತ್ಸದ ಅಂಗವಾಗಿ ಏರ್ಪಡಿಸಿರುವ ಶಿಕ್ಷಣ ಮಂಡಳಿ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ನಂತರ ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

1. ಶ್ರೀ ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು, ಬಿ.ಇ.ಎಂ.ಎಲ್ ಬಡಾವಣೆ, ಮೈಸೂರು.
2. ಶ್ರೀಮತಿ ಎಸ್.ವೀಣಾ ಅಚ್ಚಯ್ಯ, ವಿಧಾನ ಪರಿಷತ್ ಸದಸ್ಯರು, ಮುಕ್ಕೊಡಲು ಗ್ರಾಮ, ಕೊಡಗು.
3. ಪ್ರೊ. ಸಿ.ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀ ಆರ್.ಧರ್ಮಸೇನಾ, ವಿಧಾನ ಪರಿಷತ್ ಸದಸ್ಯರು, ಮೈಸೂರು.

2. ಶ್ರೀ ಎಂ.ಎ.ಗೋಪಾಲಸ್ವಾಮಿ, ವಿಧಾನ ಪರಿಷತ್ ಸದಸ್ಯರು, ಮಂಡ್ಯ
3. ಡಾ. ಎಸ್.ಟಿ.ರಾಮಚಂದ್ರ, ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.

ತದನಂತರ, ಸನ್ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು ಮತ್ತು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 102ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

| | |
|---|---|
| ವಿಶೇಷ ಸಭೆ 2022/1.1 | 102ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ. |
| ತೀರ್ಮಾನ | ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಯವರ ದಿನಾಂಕ: 25-02-2022 ಪತ್ರದನ್ವಯ 102ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದ್ಮವಿಭೂಷಣ ಡಾ. ವಾಸುದೇವ್ ಕೆ. ಆತ್ರೆ, ವಿಶ್ರಾಂತ ಮಹಾ ನಿರ್ದೇಶಕರು, ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ದಿ. ಶ್ರೀ ಪುನೀತ್ ರಾಜಕುಮಾರ್ (ಮರಣೋತ್ತರ) ಖ್ಯಾತ ಚಲನಚಿತ್ರ ನಾಯಕ ನಟರು, ಗಾಯಕರು ಹಾಗೂ ಸಮಾಜ ಸೇವಕರು, ಶ್ರೀ ಎಂ.ಮಹಾದೇವಸ್ವಾಮಿ, ಖ್ಯಾತ ಜಾನಪದ ಕಲಾವಿದರು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಇವರುಗಳಿಗೆ ಕ್ರಮವಾಗಿ D.Sc., D.Litt. (Posthumous). ಮತ್ತು D.Litt ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಕುಲಾಧಿಪತಿಗಳು ಅನುಮೋದಿಸಿರುವುದನ್ನು ಶಿಕ್ಷಣ ಮಂಡಳಿಯ ವಿಶೇಷ ಸಭೆಯು ಅನುಸಮರ್ಥಿಸಿತು. |
| ವಿಶೇಷ ಸಭೆ 2022/1.2 | 102ನೇ ವಾರ್ಷಿಕ ಘಟಿಕೋತ್ಸವದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ವಿವಿಧ ಪದವಿಗಳನ್ನು 102ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಶಿಕ್ಷಣ ಮಂಡಳಿಯ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿತು. |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, 102ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರುಗಳು ಸಹಕರಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಸಹಿ/-
ಕುಲಪತಿ ಹಾಗೂ ಅಧ್ಯಕ್ಷರು